# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 524 |
| ಮಾನ್ಯ ಸದಸ್ಯರ ಹೆಸರು | ಶ್ರೀಎಸ್.ವ್ಹಿ.ಸಂಕನೂರು(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾಗಿದ್ದ ದಿನಾಂಕ | 10.07.2023 |
| ಉತ್ತರಿಸುವ ಸಚಿವರು | ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ದಿನಾಂಕ:01.04.2006ರಿಂದ ನೇಮಕಗೊಂಡ ಖಾಯಂ ನೌಕರರಿಗೆ ದಿ:27.08.2020ರಿಂದ ಎನ್.ಪಿ.ಎಸ್. ಭವಿಷ್ಯಾವರ್ತಿಯಾಗಿ ಜಾರಿಗೊಳಿಸಿದ್ದು, ಸದರಿ ನೌಕರರು ಖಾಯಂಯಾತಿ ಹೊಂದಿದ ದಿನಾಂಕದಿಂದ ಜಾರಿಯಾದ ದಿನಾಂಕದವರೆಗೆ (ದಿ:27.08.2020) ಸಲ್ಲಿಸಿದ ಸೇವೆಗೆ ಪಿಂಚಣಿ ಸೌಲಭ್ಯದಿಂದ ವಂಚಿತವಾದ ಅವಧಿಯ ನಷ್ಟವನ್ನು ಹೇಗೆ ಭರಿಸಲಾಗುತ್ತದೆ; (ಸಂಪೂರ್ಣ ಮಾಹಿತಿ ನೀಡುವುದು) | ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ದಿನಾಂಕ:27.08.2020ರಿಂದ ಅನ್ವಯಿಸುವಂತೆ NPS ಅಳವಡಿಸಿಕೊಂಡಿದ್ದು, ದಿನಾಂಕ:01.04.2006ರಿಂದ ದಿನಾಂಕ:27.08.2020ರ ಅವಧಿಯಲ್ಲಿ ಹೊಸ ಅಂಶದಾಯಿ ಪಿಂಚಣಿ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ನೌಕರನ ವಂತಿಗೆಯನ್ನು ಕಟಾವಣೆ ಮಾಡಿರುವುದಿಲ್ಲ.<br>ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ (ಎಸ್‌ಪಿಎಲ್) 209 ಪಿಇಎನ್ 2012, ದಿ:21.02.2015ರಲ್ಲಿ ಸ್ವಾಯತ್ತ ಸಂಸ್ಥೆಗಳು. ವಿಶ್ವವಿದ್ಯಾಲಯಗಳು, ನಿಗಮ ಮಂಡಳಿಗಳು, ಮಹಾನಗರ ಪಾಲಿಕೆಗಳು ಮುಂತಾದವುಗಳು ಎನ್ ಪಿ ಎಸ್ ಯೋಜನೆಯನ್ನು ಅಳವಡಿಸಿಕೊಳ್ಳಲು ಯಾವುದೇ ಸಂಪನ್ಮೂಲವನ್ನು ಒದಗಿಸುವುದಿಲ್ಲವೆಂದು, ಅವು ತಮ್ಮ ಸ್ವಂತ ಸಂಪನ್ಮೂಲದಿಂದಲೇ ಭರಿಸತಕ್ಕದೆಂದು ಸ್ಪಷ್ಟಪಡಿಸಲಾಗಿದೆ. |
| ಆ) | ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಗಳಲ್ಲಿ ದಿನಾಂಕ:01.04.2006ರ ನಂತರ ನೇಮಕಗೊಂಡು ನಿವೃತ್ತಿ ಹೊಂದಿದ ಹಾಗೂ ಭವಿಷ್ಯದಲ್ಲಿ ನಿವೃತ್ತಿ ಹೊಂದುವ ನೌಕರರಿಗೆ ಮತ್ತು ಮರಣ ಹೊಂದಿದವರಿಗೆ ಡಿ.ಸಿ.ಆರ್.ಜಿ ಸೌಲಭ್ಯವನ್ನು ನೀಡದಿರಲು ಕಾರಣವೇನು; | ಸರ್ಕಾರದ ಆದೇಶ ಸಂಖ್ಯೆ:ಆಇ 34 ಪಿಇಎನ್ 2018, ದಿನಾಂಕ:23.06.2018ರಲ್ಲಿ ಮತ್ತು ಸರ್ಕಾರದ ಆದೇಶ ಸಂಖ್ಯೆ:ಆಇ-ಪಿಇಎನ್/149/2022, ದಿನಾಂಕ: 19.10.2022 ರಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರಿಗೆ ನಿವೃತ್ತಿ ಮತ್ತು ಮರಣ ಉಪದಾನ ಹಾಗೂ ಕುಟುಂಬ ಪಿಂಚಣಿ ಸೌಲಭ್ಯವನ್ನು ದಿನಾಂಕ:01.06.2006ರಿಂದ ಜಾರಿಗೆ ಬರುವಂತೆ ವಿಸ್ತರಿಸಿ ಆದೇಶಿಸಲಾಗಿದ್ದು, ರಾಜ್ಯದ ಸ್ವಾಯತ್ತ ಸಂಸ್ಥೆಗಳು, ನಿಗಮ-ಮಂಡಳಿಗಳು, ಸಂಘಗಳು, ವಿಶ್ವವಿದ್ಯಾಲಯಗಳು, ರಾಜ್ಯದ ಅನುದಾನಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ. |
| ಇ) | ದಿನಾಂಕ:01.04.2006ರ ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಗಳಲ್ಲಿ ಖಾಯಂ ಆಗಿ ನೇಮಕಗೊಂಡು ಸೇವಾವಧಿಯಲ್ಲಿಯೇ ಎಷ್ಟು ನೌಕರರು ಮೃತಪಟ್ಟಿರುತ್ತಾರೆ; ಅವರ ಅವಲಂಬಿತ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ; ನೀಡದಿದ್ದಲ್ಲಿ ಕಾರಣವೇನು? (ವಿವರ ನೀಡುವುದು) | ದಿನಾಂಕ:01.04.2006ರ ನಂತರ ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಗಳಲ್ಲಿ ಖಾಯಂ ಆಗಿ ನೇಮಕಗೊಂಡು ಸೇವಾವಧಿಯಲ್ಲಿಯೇ ಒಟ್ಟು-47 ನೌಕರರು ಮೃತಪಟ್ಟಿರುತ್ತಾರೆ ಹಾಗೂ ಅವಲಂಬಿತ ಕುಟುಂಬದ 21 ಮಂದಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲಾಗಿದೆ. ಉಳಿದ 26 ಪ್ರಕರಣಗಳಲ್ಲಿ 25 ನೌಕರರು ಮರಣ ಹೊಂದಿರುವ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಕುರಿತಂತೆ ಆಯಾ ಸಂಸ್ಥೆಗಳಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. 01 ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. (ವಿವರವನ್ನೊಳಗೊಂಡ ಅನುಬಂಧ-1ನ್ನು ಇದರೊಂದಿಗೆ ಲಗತ್ತಿಸಿದೆ) |

| | | |
|---|---|---|
| ಈ) | ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಗಳಲ್ಲಿ ದಿನಾಂಕ:01.04.2006ರ ನಂತರ ನೇಮಕಗೊಂಡು ಸೇವಾವಧಿಯಲ್ಲಿ ಮರಣ ಹೊಂದಿದ ನೌಕರರ ಅವಲಂಬಿತ ಕುಟುಂಬ ವರ್ಗದವರಿಗೆ ಕುಟುಂಬ ಪಿಂಚಣಿ ಯೋಜನೆ ಅವಕಾಶವನ್ನು ನೀಡದಿರಲು ಕಾರಣವೇನು? (ಸಂಪೂರ್ಣ ಮಾಹಿತಿ ನೀಡುವುದು) | NPS ನೌಕರರ PRAN ಖಾತೆಯಲ್ಲಿನ ಮೊತ್ತವನ್ನು ಇತ್ಯರ್ಥಪಡಿಸುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ(ಎಸ್‌ಪಿಎಲ್) 203 ಪಿಇಎನ್ 2012(ಪಿ), ದಿನಾಂಕ:18.05.2016 ಮತ್ತು ಸರ್ಕಾರದ ಆದೇಶ ಸಂಖ್ಯೆ:ಆಇ 201 ಪಿಇಎನ್ 2021, ದಿನಾಂಕ:29.11.2021ರಲ್ಲಿ ಆದೇಶಿಸಲಾಗಿದ್ದು, ಅದರನ್ವಯ ಕ್ರಮವಹಿಸಲಾಗುತ್ತಿದೆ. |

ಸಂಖ್ಯೆ: ಎಂಇಡಿ 316 ಎಂಪಿಎಸ್ 2023

(ಡಾ|| ಶರಣಪ್ರಕಾಶ ಆರ್. ಪಾಟೀಲ್)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು

## ಅನುಬಂಧ-1

| S L No | ಸಂಸ್ಥೆಗಳು/ ಕಾಲೇಜುಗಳು | ಮೃತ ನೌಕರರ ಸಂಖ್ಯೆ | ಅನುಕಂಪದ ಆಧಾರದ ಮೇಲೆ ಉದ್ಯೋಗ ಪಡೆದವರ ಸಂಖ್ಯೆ | ಅನುಕಂಪದ ಆಧಾರಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣಗಳ ಸಂಖ್ಯೆ | ಷರಾ |
|---|---|---|---|---|---|
| 1 | ಬಿಎಂಸಿ & ಆರ್ ಐ, ಬೆಂಗಳೂರು. | 2 | 0 | 2 | ಡಾ. ಕೇಶವಮೂರ್ತಿ ಎಂ. (ಗ್ರೂಪ್-ಎ), ಶ್ರೀ ನರಸಿಂಹ ಮೂರ್ತಿ. (ಗ್ರೂಪ್-ಸಿ) ನೌಕರರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡುವ ಬಗ್ಗೆ ಆಡಳಿತ ಪರಿಷತ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಲು ಕ್ರಮವಹಿಸಲಾಗಿದೆ. |
| 2 | ಬೀದರ್, ವೈ.ವಿ.ಸಂಸ್ಥೆ, ಬೀದರ್ | 11 | 4 | 7 | ಶ್ರೀ ಗೋಪಾಲ್ ರಾವ್, ಶ್ರೀಮತಿ ಜಮುನಾಬಾಯಿ, ಶ್ರೀಮತಿ ಸುಜಯ, ಶ್ರೀ ಬಸವರಾಜ್ ಸಜ್ಜನ್ ನೌಕರರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ.<br>ಡಾ. ಗೌರಿಶಂಕರ್, ಶ್ರೀ ಚಂದ್ರಕಾಂತ್ ಪಾಟೀಲ್, ಶ್ರೀಮತಿ ಅರುಣ ಕುಮಾರಿ, ಇವರು ಮರಣ ಹೊಂದಿದ್ದು ಸದರಿ ಕುಟುಂಬದವರಿಂದ ಉದ್ಯೋಗಕ್ಕೆ ಸಂಬಂಧಿಸಿದಂತೆ ಅರ್ಜಿ ಸ್ವೀಕೃತವಾಗಿರುವುದಿಲ್ಲ.<br>ಶ್ರೀ ಶಿವರಾಜ್ ರಂಜೇರಿ, ಶ್ರೀ ಪಂಡಿತ್, ಸದರಿ ಕುಟುಂಬದವರಿಗೆ ಉದ್ಯೋಗ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ.<br>ಶ್ರೀ ತುಳಸಿ ರಾಮ ಸಾವಳಗಿ, ಇವರು ಮರಣ ಹೊಂದಿದ್ದು ಸದರಿ ಕುಟುಂಬದವರಿಗೆ ಉದ್ಯೋಗ ನೀಡುವ ಪ್ರಸ್ತಾವನೆಯನ್ನು ತಡೆಹಿಡಿಯಲಾಗಿದೆ.<br>ಡಾ. ರಾಜಶೇಖರ್, ಇವರ ಕುಟುಂಬದವರಿಗೆ ಉದ್ಯೋಗ ನೀಡುವ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ. |
| 3 | ಬೆಳಗಾವಿ, ವೈ.ವಿ.ಸಂಸ್ಥೆ, ಬೆಳಗಾವಿ. | 6 | 0 | 6 | ಶ್ರೀ ರಾಮಪ್ಪ ನಾಯ್ಕರ, ಶ್ರೀ ಪಾಂಡುರಂಗ ಪಿಸೆ, ಶ್ರೀ ಸಚಿನ ಸಾಕೆ, ಶ್ರೀಮತಿ ರಾಜೇಶ್ವರ ಪತ್ತಾರ, ಸದರಿ ನೌಕರರು ಮರಣ ಹೊಂದಿದ್ದು, ಕುಟುಂಬದವರಿಗೆ ಉದ್ಯೋಗ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ.<br>ಶ್ರೀಮತಿ ರಾಜಶ್ರೀ ಕೆ, ಶ್ರೀಮತಿ ಶೋಭಾ ಪಾಟೀಲ್ , ಸದರಿ ನೌಕರರು ಮರಣ ಹೊಂದಿದ್ದು, ಕುಟುಂಬದವರಿಂದ ಅರ್ಜಿ ಸ್ವೀಕೃತವಾಗಿರುವುದಿಲ್ಲ. |
| 4 | ಶಿವಮೊಗ್ಗ, ವೈ.ವಿ.ಸಂಸ್ಥೆ, ಶಿವಮೊಗ್ಗ. | 2 | 2 | 0 | ಡಾ. ವರುಣ್ , ಶ್ರೀ ಈಶ್ವರ್ ಗೌಡ ನಿಸ್ಸಿಂ. ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ. |
| 5 | ಹಾಸನ , ವೈ.ವಿ.ಸಂಸ್ಥೆ, ಹಾಸನ | 7 | 1 | 6 | ಡಾ. ಪರಮೇಶ್.ಎಸ್, ಡಾ.ದಾದಾಪೀರ್, ಡಾ.ಶಿವರಾಜು, ಹೊನ್ನೇಗೌಡ, ಡಾ.ಸುರೇಶ್ ಆರ್.ಎಮ್ ಮರಣ ಹೊಂದಿದ್ದು, ಕುಟುಂಬದವರಿಂದ ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ.<br>ಶ್ರೀ ಬಾಲಕೃಷ್ಣ ಇವರ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ.<br>ಡಾ. ತಿಪ್ಪೇರುದ್ರಯ್ಯ ಇವರ ಕಟುಂಬದವರಿಗೆ ಉದ್ಯೋಗ ನೀಡುವ ಪ್ರಸ್ತಾವನೆ ಬಗ್ಗೆ ಆಡಳಿತ ಪರಿಷತ್ ಸಭೆಯಲ್ಲಿ ಪ್ರಸ್ತಾವನೆಯನ್ನು ಮಂಡಿಸಲು ಕ್ರಮವಹಿಸಲಾಗಿದೆ. |
| 6 | ಮಂಡ್ಯ , ವೈ.ವಿ.ಸಂಸ್ಥೆ, ಮಂಡ್ಯ. | 5 | 5 | 0 | ಸಿ.ಶಿವಲಿಂಗಯ್ಯ, ಹೆಚ್.ಶಿವಲಿಂಗಯ್ಯ, ಶ್ರೀ ನಾಗೇಶ್ ಎಂ.ಜಿ.ಶಿವಲಿಂಗಯ್ಯ, ಬಿ.ರಾಜು ಸದರಿ ನೌಕರರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ. |
| 7 | ಗುಲ್ಬರ್ಗಾ , ವೈ.ವಿ.ಸಂಸ್ಥೆ, ಗುಲ್ಬರ್ಗಾ. | 1 | 0 | 1 | ಡಾ. ರವೀಂದ್ರ ಚಿಮ್ಕೋಡೆ, ಇವರು ಮರಣ ಹೊಂದಿದ್ದು, ಸದರಿ ಕುಟುಂಬದವರಿಂದ ಉದ್ಯೋಗಕ್ಕೆ ಸಂಬಂಧಿಸಿದಂತೆ ಅರ್ಜಿ ಸ್ವೀಕೃತವಾಗಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ. |
| 8 | ಕೊಪ್ಪಳ, ವೈ.ವಿ.ಸಂಸ್ಥೆ, ಕೊಪ್ಪಳ | 2 | 0 | 2 | ಶರಣಪ್ಪ ಸೂಡಿ, ಶ್ರೀ ಬಸವರಾಜು, ನೌಕರರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡುವ ಬಗ್ಗೆ ಆಡಳಿತ ಪರಿಷತ್ ಸಭೆಯ ತೀರ್ಮಾನದ ಅನ್ವಯ ಕ್ರಮವಹಿಸಲಾಗುವುದು. |
| 9 | ಗದಗ, ವೈ.ವಿ.ಸಂಸ್ಥೆ, ಗದಗ. | 1 | 1 | 0 | ಶ್ರೀಮತಿ ಸಿಮಾ ಪ್ರಭುಕರ್, ಸದರಿ ನೌಕರರ ಪತಿಯು ಈಗಾಗಲೇ ಸರ್ಕಾರಿ ನೌಕರಿಯಲ್ಲಿರುತ್ತಾರೆ. |

| | | | | | |
|---|---|---|---|---|---|
| 10 | ಶ್ರೀ ಅಟಲ್ ಬಿಹಾರಿ ವಾಜಪೇಯಿ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ,ಬೆಂಗಳೂರು | 1 | 0 | 1 | ಶ್ರೀ ಕಲಕಪ್ಪ ಅಂಗಡಿ, ಇವರು ಮರಣ ಹೊಂದಿದ್ದು, ಸದರಿ ಕುಟುಂಬದವರಿಂದ ಉದ್ಯೋಗ ನೀಡುವ ಪ್ರಸ್ತಾವನೆಯು ನಿರ್ದೇಶನಾಲಯಕ್ಕೆ ದಿನಾಂಕ:01.06.2023ರಂದು ಸ್ವೀಕತವಾಗಿದ್ದು, ಮಾಹಿತಿ ಕೋರಿ ಸಂಸ್ಥೆಯವರಿಗೆ ಪತ್ರ ಬರೆಯಲಾಗಿದೆ. |
| 11 | ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು. | 4 | 4 | 0 | ಶ್ರೀ ಎನ್. ಇಂದೂಕುಮಾರ್, ಮರಣ ಹೊಂದಿದ್ದು, ಸದರಿ ಕುಟುಂಬದವರು ಈಗಾಗಲೇ ಸರ್ಕಾರಿ ಕೆಲಸದಲ್ಲಿರುತ್ತಾರೆ. ಉಳಿದ ನೌಕರರುಗಳಾದ ಡಾ. ದತ್ತಾತ್ರೇಯ.ಪಿ.ವಿ, ಶ್ರೀ ಪಿ. ಸುರೇಶ್, ಶ್ರೀಮತಿ ಅರ್ಚನಾ, ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ. |
| 12 | ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೆಂಗಳೂರು. | 1 | 1 | 0 | ಡಾ. ಪ್ರವೀಣ್ ರಾಥೋಡ್ ಇವರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ. |
| 13 | ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ, ಬೆಂಗಳೂರು | 1 | 0 | 1 | ಶ್ರೀ ರಾಮ ಇವರು ಮರಣ ಹೊಂದಿದ್ದು, ಸದರಿ ನೌಕರರ ಕಟುಂಬದವರಿಗೆ ಉದ್ಯೋಗ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| 14 | ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು. | 2 | 2 | 0 | ಶ್ರೀನಿವಾಸ ಕುಲಕರ್ಣಿ ಇವರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ.<br>ಶ್ರೀಮತಿ ಸ್ವಪ್ನ ಆರ್. ಎಸ್. ಇವರು ಮರಣ ಹೊಂದಿದ್ದು, ಸದರಿ ನೌಕರರ ಕುಟುಂಬದವರಲ್ಲಿ ಅರ್ಹ ಅವಲಂಬಿತರು ಇರುವುದಿಲ್ಲ. |
| 15 | ಸಂಜಯ್ ಗಾಂಧಿ ಟ್ರಾಮ ಮತ್ತು ಚಿಕಿತ್ಸಾ ಸಂಸ್ಥೆ, ಬೆಂಗಳೂರು. | 1 | 1 | 0 | ಶ್ರೀ ಹೆಚ್ ರಾಜು , ಇವರು ಮರಣ ಹೊಂದಿದ್ದು, ಸದರಿ ಕುಟುಂಬದವರಿಗೆ ಉದ್ಯೋಗ ನೀಡಲಾಗಿದೆ. |
| 16 | ಕರ್ನಾಟಕ ಮಧುಮೇಹ ಸಂಸ್ಥೆ, ಬೆಂಗಳೂರು | 0 | 0 | 0 | ಸದರಿ ಸಂಸ್ಥೆಗಳಲ್ಲಿ ಯಾವುದೇ ಪ್ರಕರಣಗಳು ಇರುವುದಿಲ್ಲ. |
| 17 | ಗ್ಯಾಸ್ಟ್ರೋ ಎಂಟರಾಲಜಿ ಸಂಸ್ಥೆ, ಬೆಂಳೂರು. | 0 | 0 | 0 | |
| 18 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು. | 0 | 0 | 0 | |
| 19 | ಎಂಎಂಸಿ & ಆರ್ಐ, ಮೈಸೂರು. | 0 | 0 | 0 | |
| 20 | ಕರ್ನಾಟಕ ವೈ.ವಿ.ಸಂಸ್ಥೆ, ಹುಬ್ಬಳ್ಳಿ | 0 | 0 | 0 | |
| 21 | ವಿಜಯನಗರ, ವೈ.ವಿ.ಸಂಸ್ಥೆ, ಬಳ್ಳಾರಿ. | 0 | 0 | 0 | |
| 22 | ರಾಯಚೂರು, ವೈ.ವಿ.ಸಂಸ್ಥೆ, ರಾಯಚೂರು. | 0 | 0 | 0 | |
| 23 | ಚಾಮರಾಜನಗರ, ವೈ.ವಿ.ಸಂಸ್ಥೆ, ಚಾಮರಾಜನಗರ | 0 | 0 | 0 | |
| 24 | ಕೊಡಗು, ವೈ.ವಿ.ಸಂಸ್ಥೆ, ಮಡಿಕೇರಿ. | 0 | 0 | 0 | |
| 25 | ಕಾರವಾರ, ವೈ.ವಿ.ಸಂಸ್ಥೆ, ಕಾರವಾರ. | 0 | 0 | 0 | |
| 26 | ನಂದಿ, ವೈ.ವಿ.ಸಂಸ್ಥೆ, ಚಿಕ್ಕಬಳ್ಳಾಪುರ. | 0 | 0 | 0 | |
| 27 | ಹಾವೇರಿ, ವೈ.ವಿ.ಸಂಸ್ಥೆ, ಹಾವೇರಿ. | 0 | 0 | 0 | |
| 28 | ಯಾದಗಿರಿ, ವೈ.ವಿ.ಸಂಸ್ಥೆ, ಯಾದಗಿರಿ. | 0 | 0 | 0 | |
| 29 | ಚಿಕ್ಕಮಗಳೂರು, ವೈ.ವಿ.ಸಂಸ್ಥೆ, ಚಿಕ್ಕಮಗಳೂರು. | 0 | 0 | 0 | |
| 30 | ಸರ್ಕಾರಿ ದಂತ ಕಾಲೇಜು, ಬೆಂಗಳೂರು. | 0 | 0 | 0 | |
| 31 | ಸರ್ಕಾರಿ ದಂತ ಕಾಲೇಜು, ಬಳ್ಳಾರಿ. | 0 | 0 | 0 | |
| 32 | ಡಿಮ್ಹಾನ್ಸ್, ಧಾರವಾಡ. | 0 | 0 | 0 | |
| 33 | ಎಸ್.ಡಿ.ಎಸ್.ಟಿ.ಬಿ. ಆಸ್ಪತ್ರೆ, ಬೆಂಗಳೂರು. | 0 | 0 | 0 | |
| | ಒಟ್ಟು | **47** | **21** | **26** | |

ನಿರ್ದೇಶಕರು,
ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು.